(67)

# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/236/15-16 ದಿನಾಂಕ : 16/08/2016

ಉಪಸ್ಥಿತರು: ಶ್ರೀ ಲೊಕೇಶ ಪಿ. ಎನ್. ಕ.ಆ.ಸೇ

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀಮತಿ ಚನ್ನಬಸಮ್ಮ ಗಂಡ ಲೇಟ್ ಪರಮೇಶ್ವರಪ್ಪಾ<br>ತಂದೆ ಲೇಟ್ ಸೋಮನಗೌಡ,<br>ಸಾ|| ಜೀಗೆನಹಳ್ಳಿ ಗ್ರಾಮ, ತಾ|| ಸಂಡೂರು<br>(ಶ್ರೀ ಎಸ್.ಮುರಳಿ, ಜಿ.ಡಿ.ವಿಧ್ಯಶ್ರೀ, ಚಂದ್ರಶೇಖರ್, ವಕೀಲರು, ಬಳ್ಳಾರಿ) | 1. ತಹಶೀಲ್ದಾರರು, ಸಂಡೂರು<br>2. ಕಂದಾಯ ನೀರಿಕ್ಷಕರು, ಚೋರನೂರ<br>3. ಶ್ರೀ ಮೂಗಪ್ಪ ತಂದೆ ವೀರನಗೌಡ,<br>ಜೀಗೆನಹಳ್ಳಿ ಗ್ರಾಮ, ತಾ|| ಸಂಡೂರು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ |
|---|---|---|---|
| ಸಂಡೂರು | ಜೀಗೆನಹಳ್ಳಿ | 196/ಡಿ ,<br>228/ಸಿ | 0.30,<br>0.78 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ತಹಶೀಲ್ದಾರರು,ಸಂಡೂರು ಇವರ ಹಿಂಬರಹ ಕಂ:ಪಹಣಿ:300/14-15 ದಿನಾಂಕ:29/12/2014ರ ಹಾಗೂ ಉಪತಹಶೀಲ್ದಾರರು, ಚೋರನೂರು ಇವರ ಎಂ ಆರ್ ನಂ 04/98-99 ದಿನಾಂಕ 01/12/1998 ಗಳ ವಿರುದ್ಧ ಮೇಲ್ಮನವಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿ ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿದ್ದಾರೆ. ವಿಳಂಬ ಮನ್ನಾ ಮಾಡಿ ಪ್ರಕರಣ ದಾಖಲಿಸಿ ಕೊಳ್ಳಲಾಯಿತು ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಪ್ರಕರಣವನ್ನು ದಾಖಲಿಸಿಕೊಂಡು ಉಭಯ ಪಕ್ಷಗಾರರಿಗೂ ನೋಟೀಸನ್ನು ನೀಡಿ ದಿನಾಂಕ 10/05/2016, 08/07/2016 ಹಾಗೂ 16/08/2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ವಾದಿಯು ಈ ನ್ಯಾಯಾಲಯಕ್ಕೆ ಪ್ರಸ್ತಾಪಿತ ಜಮೀನುಗಳಿಗೆ ಸಂಬಂಧಿಸಿದಂತೆ ಮೇಲ್ಮನವಿಯನ್ನು ಸಲ್ಲಿಸಿ, ಸದರಿ ಜಮೀನುಗಳನ್ನು ವಾದಿಯು ನೊಂದಾಯಿತ ಕ್ರಯಪತ್ರ ಸಂಖ್ಯೆ 355/1957-58 ದಿನಾಂಕ 09/07/1958 ರಲ್ಲಿ ಖರೀದಿಸಿದ್ದು, ಸದರಿ ವಾದಿಯ ಹೆಸರನ್ನು ಪಹಣಿಯಲ್ಲಿ ನಮೂದಿಸುವಾಗ್ಯೆ **ಚೆನ್ನವೀರಮ್ಮ ಗಂಡ ಪರಮೇಶ್ವರಪ್ಪ, ಜೀಗೇನಹಳ್ಳಿ** ಎಂಬುದರ ಬದಲಾಗಿ ಚೆನ್ನವೀರಮ್ಮ ಗಂಡ ವೀರನಗೌಡ, ಜೀಗೇನಹಳ್ಳಿ ಎಂದು ಸ. ನಂ. 228/C ವಿಸ್ತೀರ್ಣ 0.78 ಜಮೀನಿನ ಪಹಣಿಯಲ್ಲಿ ನಮೂದಿಸಿರುವುದನ್ನು ಹಾಗೂ ಸ. ನಂ. 196/D ವಿಸ್ತೀರ್ಣ 0.30 ಎಕರೆ ಜಮೀನಿನ ಪಹಣಿಯಲ್ಲಿ **ಚೆನ್ನವೀರಮ್ಮ ಗಂಡ ಪರಮೇಶ್ವರಪ್ಪ, ಜೀಗೇನಹಳ್ಳಿ** ಎಂಬುದರ ಬದಲಾಗಿ ಚೆನ್ನಬಸಮ್ಮ ಗಂಡ ವೀರನಗೌಡ, ಜೀಗೇನಹಳ್ಳಿ ಎಂದು ನಮೂದಾಗಿರುತ್ತದೆ **ಎಂದು ತಿಳಿಸುತ್ತಾ**, ಮುಂದುವರೆದು 1998-99 ರಲ್ಲಿ ಸ. ನಂ. 196/D ವಿಸ್ತೀರ್ಣ 0.30 ಎಕರೆ ಜಮೀನಿಗೆ ಸಂಬಂಧಿಸಿದ**ಂತೆ ಪೋತಿ ವಾರ**ಸು ಮೇರೆಗೆ ಹಕ್ಕು ಬದಲಾವಣೆ ಮಾಡುವಾಗ್ಯೆ ಎಂ ನಂ 04/98-99 ದಿನಾಂಕ 01/12/1998 ರಲ್ಲಿ ವಾದಿಯ **ಮೊಮ್ಮಗನೆಂದು,** ವಾದಿಗೆ ಯಾವುದೇ ರೀತಿಯಲ್ಲಿ ಸಂಬಂಧವೇ ಇಲ್ಲದ ಮೂಗಪ್ಪ ತಂದೆ ವೀರನಗೌಡ ಎಂಬುವವರ ಹೆಸರಿ**ಗೆ ಹಕ್ಕು ಬದಲಾವಣೆ**ಗೆ ಆದೇಶಿಸಿರುವುದು ಕಾನೂನು ಬಾಹಿರವಾಗಿದ್ದು, ಸದರಿ ಆದೇಶವನ್ನು ರದ್ದು ಪಡಿಸಲು ಹಾಗೂ **ವಾದಿಯ ಹೆಸರನ್ನು** ಸರಿಯಾಗಿ ನಮೂದಿಸಲು ಕೋರಿ ವಾದಿಗಳು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಗಳು ಸಲ್ಲಿಸಿದ ಮೇಲ್ಮನವಿ ಹಾಗೂ ಹಾಜರುಪಡಿಸಿದ ದಾಖಲೆಗಳನ್ನು ಮತ್ತು ದಿನಾಂಕ 16/08/2016 ರಂದು ಸಲ್ಲಿಸಿರುವ ರಿಕಾಲ್ ಅರ್ಜಿಯನ್ನು ಪರಿಶೀಲಿಸಲಾಗಿ, ಪ್ರಕರಣವು ಭಾಗಶ: ತಿದ್ದುಪಡಿ ವ್ಯಾಪ್ತಿಗೆ ಒಳಪಟ್ಟಿದ್ದು ಮತ್ತು ಎಂ ನಂ 04/98-99 ರ ಆದೇಶವನ್ನು ರದ್ದುಪಡಿಸಿ, ವಾದಿ ಮತ್ತು ಪ್ರತಿವಾದಿ 3 ರವರಿಗೆ ಹೊಸದಾಗಿ ನಮೂನೆ -21ನ್ನು ಜಾರಿಗೊಳಿಸಿ, ಹಕ್ಕು ಬದಲಾವಣೆಗೆ ಕ್ರಮವಹಿಸಲು ಕಂದಾಯ ನಿರೀಕ್ಷಕರು, ಚೋರನೂರು ಇವರಿಗೆ ಆದೇಶಿಸುವ ಈ ಕೆಳಕಂಡ ಆದೇಶ.

:: ಆದೇಶ ::

ವಾದಿಯ ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಿದೆ.

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ ಸಂಡೂರು ತಾಲ್ಲೂಕಿನ ಜೀಗೆನಹಳ್ಳಿ ಗ್ರಾಮದ ಸ. ನಂ. 196/D ವಿಸ್ತೀರ್ಣ: 0.30 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಉಪ ತಹಶೀಲ್ದಾರರು, ಚೋರನೂರು ಇವರ ಎಂ ನಂ 04/98-99 ದಿನಾಂಕ 01/12/1998 ನ್ನು ರದ್ದುಪಡಿಸಿ ಆದೇಶಿಸಿದೆ. ವಾದಿ ಮತ್ತು ಪ್ರತಿವಾದಿ 3 ರವರಿಗೆ ಹೊಸದಾಗಿ ನಮೂನೆ -21ನ್ನು ಜಾರಿಗೊಳಿಸಿ, ಹಕ್ಕು ಬದಲಾವಣೆಗೆ ಕ್ರಮವಹಿಸಲು ಕಂದಾಯ ನಿರೀಕ್ಷಕರು, ಚೋರನೂರು ಇವರಿಗೆ ಆದೇಶಿಸಿದೆ.

ಸಂಡೂರು ತಾಲ್ಲೂಕಿನ ಜೀಗೆನಹಳ್ಳಿ ಗ್ರಾಮದ ಸ. ನಂ. 228/C ವಿಸ್ತೀರ್ಣ: 0.78 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಾದಿಯ ಹೆಸರನ್ನು ನಮೂದಿಸಲು ಕೋರಿರುವುದು ತಿದ್ದುಪಡಿ ವ್ಯಾಪ್ತಿಗೆ ಒಳಪಡುವುದರಿಂದ. ಮೂಲಕಂದಾಯ ದಾಖಲೆಗಳನ್ನು ಪರಿಶೀಲಿಸಿ, ಅಗತ್ಯ ತಿದ್ದುಪಡಿ ಪಸ್ತಾವನೆಯನ್ನು ಸಲ್ಲಿಸಲು ತಹಶೀಲ್ದಾರರು, ಸಂಡೂರು ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ದಿನಾಂಕ **16/08/2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ

ಗೆ,
ತಹಶೀಲ್ದಾರರು, ಸಂಡೂರು
ವಾದಿ ಮತ್ತು ಪ್ರತಿವಾದಿಗಳಿಗೆ